ಇರುವ, ಗ್ರಾಮಗಳನ್ನು 1988-89ರ ಸಾಲಿನ ಅಂತ್ಯದ ವೇಳೆಗಾಗಲೇ ವಿದ್ಯುದ್ದೀಕರಣಗೊಳಿಸಲಾಗಿದೆ. ಈ ತಾಲ್ಲೂಕಿನಲ್ಲಿ 1981ರ ಜನಗಣತಿ ಪ್ರಕಾರ ಗ್ರಾಮಗಳ ವಿದ್ಯುದ್ದೀಕರಣದಲ್ಲಿ ಶೇ. 100ರಷ್ಟು ಸಾಧನೆಯನ್ನು ಮಾಡಲಾಗಿದೆ.

ಪ್ರಸ್ತುತ ಈ ತಾಲ್ಲೂಕಿನಲ್ಲಿ 54 ಜನತಾ ಕಾಲೋನಿಗಳ ಮತ್ತು 28 ಹರಿಜನಬಸ್ತಿಗಳ ವಿದ್ಯುದ್ದೀಕರಣಕ್ಕೆ ಒಂದು ಆರ್.ಇ.ಸಿ. ಯೋಜನೆ ಮಂಜೂರಾಗಿದೆ. ಇದರಲ್ಲಿ 13 ಜನತಾ ಕಾಲೋನಿಗಳ ಮತ್ತು 2 ಹರಿಜನ ಬಸ್ತಿಗಳ ವಿದ್ಯುದ್ದೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಆ ಮತ್ತು ಇ) ವಿದ್ಯುದ್ದೀಕರಣ ಕಾರ್ಯಕ್ಕೆ ಬೇಕಾಗಿರುವ ಕಂಬಗಳನ್ನು ಈಗಾಗಲೇ ಒದಗಿಸಲಾಗಿದೆ. ಎ.ಸಿ.ಎಸ್.ಆರ್. ವಿದ್ಯುತ್ ತಂತಿಗಳ ಸರಬರಾಜಿನಲ್ಲಿ ಸ್ವಲ್ಪ ವಿಳಂಬ ಉಂಟಾದುದರಿಂದ ವಿದ್ಯುದ್ದೀಕರಣ ಕಾರ್ಯದಲ್ಲಿ ಸ್ವಲ್ಪಮಟ್ಟಿಗೆ ಹಿನ್ನಡೆ ಉಂಟಾಗಿದೆ. ವಿದ್ಯುದ್ದೀಕರಣ ಕಾರ್ಯಕ್ಕೆ ಬೇಕಾಗಿರುವ ವಿದ್ಯುತ್ ತಂತಿಗಳನ್ನು ಸರಬರಾಜು ಮಾಡಲು ಕ್ರಮಕೈಗೊಂಡು ವಿದ್ಯುದ್ದೀಕರಣ ಕಾರ್ಯವನ್ನು ಚುರುಕುಗೊಳಿಸಲಾಗುವುದು.

ವಿಷಯ: ದ.ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕಿಂಡಿ ಅಣೆಕಟ್ಟಿನ ಹಲಗೆಗಳಿಗೆ ಟಾರು ಬದಲಿಗೆ ಪೈಂಟ್ ಬಳಸುವಿಕೆ.

895 (1248)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಕಿಂಡಿ ಅಣೆಕಟ್ಟಿನ ಹಲಗೆಗಳಿಗೆ ಹಿಂದಿನಿಂದ ಟಾರು ಹಾಕುತ್ತಿದ್ದು ಈಗ ಟಾರು ಹಾಕುವ ಬದಲು ಪೈಂಟ್ ಬಳಸುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಕಿಂಡಿ ಅಣೆಕಟ್ಟುಗಳ ಅಂದಾಜು ಪಟ್ಟಿಯಲ್ಲಿ ಟಾರು ಎಂದು ನಮೂದಿಸಿದ್ದರೂ ದುಬಾರಿ ಬೆಲೆಯ ಪೈಂಟನ್ನು ಖರೀದಿಸಲು ಕಾರಣವೇನು?

ಇ) ಇದರಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರವಾಗಿದ್ದು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂರ್ಜಲ ಅಭಿವೃದ್ಧಿ ಸಚಿವರು):

ಅ) ಬಂದಿದೆ.

ಆ) ಕಂಡಿ ಅಣೆಕಟ್ಟು ಹಾಗೂ ಉಪ್ಪು ನೀರು ತಡೆ ಅಣೆಕಟ್ಟಿಗಾಗಿ ಹಲಗೆಗಳನ್ನು ಉಪಯೋಗಿಸುತ್ತಿದ್ದು ಇವುಗಳ ಸಂರಕ್ಷಣೆಗಾಗಿ ಪ್ರತಿ ಸಾಲಿನಲ್ಲಿಯೂ ಡಾಂಬರ್ ಲೇಪನವನ್ನು ಮಾಡಲಾಗುತ್ತಿತ್ತು. ಉಪ್ಪು ನೀರಿನ ಕ್ರಿಯೆಯಿಂದ ಹಲಗೆಗಳು ಬೇಗನೆ ಹಾಳಾಗುತ್ತವೆ. ಇದರ ಬದಲು ಎ.ಸಿ.ಎಲ್.ಬಿ. ಕಾಂಪೌಂಡನ್ನು ಎರಡು ಬಾರಿ ಲೇಪನ ಮಾಡುವುದರಿಂದ ಹಲಗೆಗಳಿಗೆ 5 ವರ್ಷ ಕಾಲ ಲೇಪನ ಮಾಡುವ ಅಗತ್ಯವಿರುವುದಿಲ್ಲ. ಹಾಗೂ ಹಲಗೆಗಳ ಬಾಳಿಕೆಯು 5 ವರ್ಷಗಳಿಗಿಂತ ಹೆಚ್ಚಾಗಿ ಬಾಳಿಕೆ ಬರುವುದರಿಂದ ಪೈಂಟನ್ನು ಖರೀದಿಸಿ ಬಳಸಲಾಗುತ್ತಿದೆ.

ಇ) ಈ ಬಗ್ಗೆ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ.

ವಿಷಯ: ಗುಳೇದಗುಡ್ಡ ಕ್ಷೇತ್ರದ ಕೆರೆಗಳಿಗೆ ಬಿಡುಗಡೆ ಮಾಡಲಾದ ಅನುದಾನ

897 (1211)

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ಅಡಿಯಲ್ಲಿ ಬರುವ ಕೆರೆಗಳು ಯಾವುವು? (ಮೂರು ತಾಲ್ಲೂಕುಗಳನ್ನೊಳಗೊಂಡ ವಿವರ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಕೆರೆಗಳ ಹೂಳು ತೆಗೆಯಲು, ದುರಸ್ತಿ ಮಾಡಲು ಹಾಗೂ ವಿವಿಧ ಯೋಜನೆಗಳ ಅಡಿಯಲ್ಲಿ ಯಾವ ಯಾವ ಕೆರೆಗಳಿಗೆ ಎಷ್ಟೆಷ್ಟು ಅನುದಾನ ನೀಡಲಾಗಿದೆ? (ವಿವರ ಕೊಡುವುದು)

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಗುಳೇದಗುಡ್ಡ ಮತ ಕ್ಷೇತ್ರದ ಸಣ್ಣ ನೀರಾವರಿ ಇಲಾಖೆ ಅಡಿಯಲ್ಲಿ ಬರುವಂತಹ ಕೆರೆಗಳು ಈ ಕೆಳಗಿನಂತೆ ಇವೆ.

ಕ್ರ. ಸಂ.	ತಾಲ್ಲೂಕು	ಕೆರೆಗಳ ಹೆಸರು	ನೀರಾವರಿ ಕ್ಷೇತ್ರ
1.	ಬಾಗಲಕೋಟೆ	ಶಿರೂರು ಕೆರೆ	67 ಹೆಕ್ಟೇರ್
2.	ಹುನಗುಂದ	ಬಸರಿಕಟ್ಟಿ	202 ''
	-''-	ಹಿರೇಮಾಗಿ	178 ''